೫)೧ ಬೇಸಿಗೆ ಕಾಲದಲ್ಲಿ ವನ್ಯಪ್ರಾಣಿಗಳಿಗೆ ಕುಡಿಯಲು ನೀರಿಲ್ಲದೆ ವಲಸೆ ಹೋಗುವುದನ್ನು ತಪ್ಪಿಸಲು ಸೂಕ್ತ ಸ್ಥಳಗಳಲ್ಲಿ ನೀರನ್ನು ಶೇಖರಣೆ ಮಾಡಿ ಉಳಿಸಲು ಕೆರೆ ಕಟ್ಟೆಗಳನ್ನು ಅಭಿವೃದ್ಧಿಪಡಿಸಿರುವುದಲ್ಲದೆ, ಹೊಸದಾಗಿ ನಿರ್ಮಿಸಲಾಗಿದೆ.

೨ ಬೇಸಿಗೆ ಕಾಲದಲ್ಲಿ ಕಾಡುಕಿಚ್ಚು ಬೀಳದಂತೆ ತಡೆಯಲು ಸರಹದ್ದಿನ ಹಾಗೂ ಒಳಭಾಗದ ಹಲವಾರು ಬೆಂಕಿ ಲೈನುಗಳನ್ನು ಸ್ವಚ್ಚ ಮಾಡಿ ಧಾಮದ ವನ್ಯ ಪ್ರದೇಶವನ್ನು ಕಾಡು ಕಿಚ್ಚಿನಿಂದ ರಕ್ಷಿಸಲಾಗಿದೆ.

೩ ಧಾಮದಲ್ಲಿರುವ ಕಾಡು ರಸ್ತೆಗಳನ್ನು ದುರಸ್ತಿಪಡಿಸಿ ಕಾಡಿನ ರಕ್ಷಣೆ ಹಾಗೂ ವೀಕ್ಷಣೆಗೆ ಉಪಯುಕ್ತವಾಗುವಂತೆ ಮಾಡಲಾಗಿದೆ.

೪ ಸೂಕ್ತ ಪ್ರದೇಶಗಳಲ್ಲಿ ವೀಕ್ಷಣಾ ಗೋಪುರಗಳನ್ನು ನಿರ್ಮಿಸಿ ಕಾಡುಕಿಚ್ಚು ಹಾಗೂ ಅಕ್ರಮ ಬೇಟೆಯನ್ನು ತಡೆಯಲು ಸೂಕ್ತವಾಗುವಂತೆ ಮಾಡಲಾಗಿದೆ.

೫ ವನ್ಯ ಜೀವಿಗಳು ವಲಸೆ ಹೋಗದಂತೆ ವನ್ಯಧಾಮದಲ್ಲಿ ಸೂಕ್ತವಾದ ಪ್ರದೇಶಗಳಲ್ಲಿ ಉಪ್ಪಿನ ಗುಂಡಿಗಳನ್ನು ನಿರ್ಮಿಸಲಾಗಿದೆ.

೬ ರಾಷ್ಟ್ರೀಯ ಉದ್ಯಾನವನಗಳಲ್ಲಿ ಮತ್ತು ಧಾಮಗಳಲ್ಲಿ ಹಣ್ಣು ವಂತು ನೆರಳಿನ ಮರ ಗಳನ್ನು ಬೆಳೆಸಲು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

೭ ವನಸಿರಿ ಹೆಚ್ಚಿಸಲು ಈ ಕೆಳಗಿನ ಯೋಜನೆಗಳು ಪ್ರಮುಖ ಯೋಜನೆಗಳಾಗಿವೆ.

ಅ) ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ.

ಆ) ವಿಶ್ವಬ್ಯಾಂಕ್ ನೆರವಿನ ಸಾಮಾಜಿಕ ಅರಣ್ಯ ಯೋಜನೆ.

ಇ) ಅರಣ್ಯ ಅಭಿವೃದ್ಧಿ ನಿಧಿ.

ಈ) ಕೇಂದ್ರ ಪುರಸ್ಕೃತ ಗ್ರಾಮೀಣ ಉರುವಲು ಬೆಳೆಸುವ ಯೋಜನೆ.

ಉ) ಭೂಸಾರ ಸಂರಕ್ಷಣೆ (ವನ ನಿರ್ಮಾಣ)

ಊ) ಕೇಂದ್ರ ಪುರಸ್ಕೃತ ನದಿ ಕಣಿವೆ ಪ್ರದೇಶಗಳಲ್ಲಿ ವನ ನಿರ್ಮಾಣ

ಋ) ವಿಶೇಷ ಘಟಕ ಯೋಜನೆ.

ೠ) ಗಿರಿಜನರ ಉಪಯೋಜನೆ.

ಎ) ಗ್ರಾಮೀಣ ಭೂರಹಿತ ಉದ್ಯೋಗ ಭರವಸೆ ಯೋಜನೆ.

ಏ) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ.

ಐ) ಬರಗಾಲ ಪೀಡಿತ ಪ್ರದೇಶ ಅಭಿವೃದ್ಧಿ ಯೋಜನೆ.

ಒ) ಒಣ ಭೂಮಿ ಅಭಿವೃದ್ಧಿ ಯೋಜನೆ.

ಹಾಲಿನ ಒಕ್ಕೂಟಗಳಲ್ಲಿನ ಪಶುವೈದ್ಯ ಸೇವೆ ಬಗ್ಗೆ

೧೬೮೫. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು) —ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಹಾಗೂ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲಾ ಒಕ್ಕೂಟ ಮತ್ತು ಕೆ. ಎಂ. ಎಫ್. ಘಟಕಗಳಲ್ಲಿ ಪಶುವೈದ್ಯರ ವಾರದ ಭೇಟಿ ಕಾರ್ಯ ನಡೆಯುತ್ತಿದೆಯೇ ?

ಆ) ಒಕ್ಕೂಟಗಳಲ್ಲಿ ಪಶುವೈದ್ಯರ ವಾರದ ಭೇಟಿ, ತುರ್ತು ಭೇಟಿ ಸೇವೆಗಳಿಗೆ ಪಶುವೈದ್ಯರ ಸಂಬಳ, ವಾಹನ ಬಾಡಿಗೆ ಔಷಧಿಗಳ ಖರ್ಚು ಒಟ್ಟುಗೂಡಿಸಿ ಅವರಿಂದ ಶುಶ್ರೂಷೆ ಮಾಡಲ್ಪಟ್ಟ ರಾಸುಗಳಿಗೆ ಲೆಕ್ಕಚಾರ ಮಾಡಿದಾಗ ಒಂದು ರಾಸುವಿಗೆ ತಗಲುವ ವೆಚ್ಚವೆಷ್ಟು ?

ಇ) ಈ ವೆಚ್ಚವನ್ನು ಒಕ್ಕೂಟವಾರು ತಿಳಿಸಿ ?

ಈ) ಹಲವು ಒಕ್ಕೂಟಗಳಲ್ಲಿ ನಾಮಿನಲ್ ಫೀ ರಾಸುವಿಗೆ ಒಂದು ರೂ. ಪಡೆಯುತ್ತಿದ್ದು ಕೆಲವು ಕಡೆ ಪೂರ್ತಿ ಉಚಿತವಾಗಿ ಮಾಡುತ್ತಿರುವುದು ನಿಜವೆ ?

ಉ) ಸರ್ಕಾರ ಈ ವ್ಯತ್ಯಾಸಗಳನ್ನು ಸರಿಪಡಿಸಲು ಕ್ರಮಕ್ಕೈಗೊಳ್ಳುವುದೆ ?

ಶ್ರೀ ಅಬ್ದುಲ್ ನಜೀರ್ ಸಾಬ್, (ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ಪಾವಿಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)—.

ಅ) ಹೆಚ್ಚಿನ ಒಕ್ಕೂಟಗಳಲ್ಲಿ ವಾರದ ಭೇಟಿ ಕಾರ್ಯ ನಡೆಯುತ್ತಿದೆ. ಆದಾಗ್ಯೂ ಎಲ್ಲಾ ಒಕ್ಕೂಟಗಳಲ್ಲಿಯೂ ಹಾಗೂ ರಾಯಚೂರು ಘಟಕದಲ್ಲಿ ಹೆಚ್ಚಿನ ಮಾರ್ಗಗಳನ್ನು ರಚಿಸಿ, ರೈತರಿಗೆ ಅನುಕೂಲ ಮಾಡಿಕೊಡಲಾಗುವುದು.

ಆ) ಪ್ರತಿ ರಾಸಿಗೆ ತಗಲುವ ಸರಾಸರಿ ವೆಚ್ಚ ಸುಮಾರು ರೂ. ೧೦–೬೫ ಪೈಸೆಯಿಂದ ರೂ. ೨೫ರ ವರೆಗೆ ಇರುತ್ತದೆ.

ಇ) ಅನುಬಂಧ – ' ಅ 'ರಲ್ಲಿ ಲಗತ್ತಿಸಲಾಗಿದೆ.

ಈ) ನಿಜ.

ಉ) ಒಕ್ಕೂಟದ ಆರ್ಥಿಕ ಪರಿಸ್ಥಿತಿಯನ್ನವಲಂಭಿಸಿ ಫೀ ಆಕರಣೆ ಮಾಡಲಾಗುತ್ತಿದೆ. ಆರ್ಥಿಕ ಪರಿಸ್ಥಿತಿ ಸರಿಯಿಲ್ಲದ ಒಕ್ಕೂಟಗಳು ಖರ್ಚನ್ನು ಸರಿದೂಗಿಸಲು ನಾಮಿನಲ್ ಫೀಯನ್ನು ವಸೂಲು ಮಾಡಬೇಕಾಗುತ್ತದೆ.

ಜಿಲ್ಲಾ ಹಾಲು ಉತ್ಪಾದಕರ ಸಹಕಾರಿ ಸಂಘಗಳು ಚುನಾಯಿತ ಮಂಡಳಿಗಳನ್ನೊಳಗೊಂಡಿರುವ ಪ್ರಯುಕ್ತ ಈ ವಿಷಯದಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಲಿಚ್ಛಿಸುವುದಿಲ್ಲ.

ಅನುಬಂಧ — ' ಅ "

ಒಕ್ಕೂಟ : ಘಟಕ		ಪ್ರತಿ ರಾಸುವಿಗೆ ತಗಲುವ ಸರಾಸರಿ ವೆಚ್ಚ
ಗುಲ್ಬರ್ಗ	...	೧೩.೯೫
ಬಿಜಾಪುರ	...	೨೦೦.೮೮
ಬೆಳಗಾಂ	...	೧೨೩.೫೬
ಮಂಡ್ಯ	...	೨೦.೧೮
ಮೈಸೂರು	...	೨೧.೪೭
ಧಾರವಾಡ	...	೨೫.೨೦
ರಾಯಚೂರು ಘಟಕ	...	೧೦೧.೦೨
ದಕ್ಷಿಣ ಕನ್ನಡ	...	೫೭.೦೨
ಬೆಂಗಳೂರು	...	೧೪.೫೫
ತುಮಕೂರು	...	೧೭.೪೪
ಹಾಸನ	...	೧೧.೨೦
ಕೋಲಾರ	...	೧೦.೬೫
ಶಿವಮೊಗ್ಗ	...	೧೪೬.೮೦